# ನಾಯಿ ಪ್ರೀತಿಯ ಗ್ಲೆಂಡಾ!



ಅಮೆರಿಕದಿಂದ ಬಂದ ಗ್ಲೆಂಡಾ ಪತಿ ರಹಮ್ ಜತೆಗೆ

ವೃತ್ತಿ, ಅವಕಾಶ ಮತ್ತು ಕುಟುಂಬ ನಿರ್ವಹಣೆ.. ಈ ಮೂರು ಅಂಶಗಳು ನನ್ನನ್ನು ಅಮೆರಿಕದ ಇಂಡಿಯಾನಾದ ಇವಾನ್ಸ್‌ವಿಲ್ಲೆಯಿಂದ ಬೆಂಗಳೂರಿಗೆ ಬರುವಂತೆ ಮಾಡಿತು ಎನ್ನುತ್ತಲೇ ಮಾತಿಗಾರಂಭಿಸುತ್ತಾರೆ ಅಮೆರಿಕ ಮೂಲದ ಗ್ಲೆಂಡಾ. ಈಗ ಇವರು ಬೆಂಗಳೂರಿನ ಕಾಯಂ ನಿವಾಸಿ.

ಅಮರಿಕದ ಗ್ಲೆಂಡಾ ಭಾರತೀಯ ಮೂಲದ ರಹಮ್ ಅವರನ್ನು ಮದುವೆಯಾಗಿದ್ದಾರೆ. ರಹಮ್ ಅವರನ್ನು ಮೊದಲ ಬಾರಿಗೆ ಭೇಟಿಯಾದ ಬಗ್ಗೆ, ಪರಿಚಯ, ಪ್ರೇಮಕ್ಕೆ ತಿರುಗಿದ ಬಗೆಯನ್ನು ವಿವರಿಸುವ ಗ್ಲೆಂಡಾ, ‘ನಾನು ದಕ್ಷಿಣ ಇಂಡಿಯಾನಾದಲ್ಲಿ ಹೆಲ್ತ್‌ಕೇರ್ ಅಂಡ್ ಮೆಂಟಲ್ ಹೆಲ್ತ್ ಸರ್ವೀಸಸ್ ನಲ್ಲಿ ಕೆಲಸ ಮಾಡುತ್ತಿದ್ದೆ. 1998ರಲ್ಲಿ ಕ್ಯಾಲಿಫೋರ್ನಿಯಾದ ಆಸ್ಪತ್ರೆಯೊಂದರಲ್ಲಿ ನನ್ನ ಅರ್ಹತೆಗೆ ಅನುಗುಣವಾದ ಕೆಲಸವೇ ಖಾಲಿ ಇದೆ ಎಂಬ ಮಾಹಿತಿ ಗೊತ್ತಾಯಿತು, ಹೀಗಾಗಿ ಅಲ್ಲಿಗೆ ಹೋಗಿ ಕೆಲಸಕ್ಕೆ ಸೇರಿದೆ. ಕೆಲ ದಿನಗಳ ನಂತರ ಕಂಪ್ಯೂಟರ್ ಕಲಿತು ಅದರಲ್ಲೇ ಏನಾದರೂ ಕೆಲಸ ಮಾಡುವ ಆಸೆ ಉಂಟಾಯಿತು. ಆಗ ಕಂಪ್ಯೂಟರ್, ಇಂಟರ್ನೆಟ್ ಕ್ರಾಂತಿ ಆಗಿದ್ದ ಕಾಲ. ನಾನು ಕಂಪ್ಯೂಟರ್ ಪ್ರೋಗ್ರಾಮಿಂಗ್ ಕಲಿತೆ. ಜತೆಗೆ ವೃತ್ತಿಯನ್ನೂ ಬದಲಿಸುವ ನಿಟ್ಟಿನಲ್ಲಿ ಬಲವಾಗಿ ಯೋಚಿಸತೊಡಗಿದೆ. ಅದೇ ಸಮಯಕ್ಕೆ ಅಲ್ಲಿಗೆ ರಹಮ್ ಬಂದಿದ್ದರು. ‘ಅಮೆರಿಕ ಆನ್‌ಲೈನ್’ ಮೂಲಕ ರಹಮ್ ಪರಿಚಯವಾಯಿತು. ಪರಿಚಯ ಸ್ನೇಹಕ್ಕೆ ತಿರುಗಿ 1999ರಲ್ಲಿ ನಾವು ಮದುವೆಯಾದೆವು’ ಎನ್ನುತ್ತಾರೆ.

ಅದಾಗಿ ಕೆಲಸದ ನಿಮಿತ್ತ ಅನೇಕ ಬಾರಿ ಗ್ಲೆಂಡಾ ಬೆಂಗಳೂರಿಗೆ ಭೇಟಿ ನೀಡಿದ್ದಾರೆ. ಕೆಲವೊಮ್ಮೆ ರಹಮ್ ಜತೆಗೆ ಕೂಡ. ಇಲ್ಲಿನ ಸಂಸ್ಕೃತಿ, ವಾತಾವರಣದ ಬಗ್ಗೆ ಹೆಚ್ಚಿನ ಕುತೂಹಲ, ಆಸಕ್ತಿ ತಳೆದಿದ್ದಾರೆ ಗ್ಲೆಂಡಾ. ಜತೆಗೆ ಇಲ್ಲಿನ ಪ್ರವಾಸಿತಾಣಗಳನ್ನೂ ಬಹುವಾಗಿ ಇಷ್ಟಪಡುತ್ತಾರೆ.

ಗ್ಲೆಂಡಾ ಸಂಪೂರ್ಣವಾಗಿ ವಿದೇಶಿ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಂಡ ಮಹಿಳೆ; ಇಲ್ಲಿಗೆ ಇಷ್ಟು ಚೆನ್ನಾಗಿ ಹೊಂದಿಕೊಂಡದ್ದು ನೋಡಿ ರಹಮ್‌ಗೆ ಅಚ್ಚರಿಯಾಗಿದೆಯಂತೆ. ‘ಶಿ ಲವ್ಸ್ ಇಂಡಿಯಾ ಅಂಡ್ ಇಂಡಿಯನ್ ಕಲ್ಚರ್’ ಎಂದು ಉದ್ಗಾರ ಎತ್ತುತ್ತಾರೆ ರಹಮ್. ಆದರೂ ಆಕೆ ಕಾಲೇಜು ಓದುತ್ತಿರುವಾಗ ಭಾರತೀಯ ಸಂಸ್ಕೃತಿಯ ಬಗ್ಗೆ ತಿಳಿದುಕೊಂಡಿದ್ದರಂತೆ. ಗಣೇಶನ ವಿಗ್ರಹವನ್ನು ನೋಡಿ ಬಹಳ ಇಷ್ಟಪಟ್ಟಿದ್ದರಂತೆ. ಭಾರತೀಯ ಇತಿಹಾಸದ ಪುಸ್ತಕವನ್ನು ಆಗಲೇ ಓದಿಕೊಂಡಿದ್ದರಂತೆ. ಈಗ ಭಾರತೀಯನನ್ನೇ ಮದುವೆಯಾಗಿ ‘ಐ ಆ್ಯಮ್ ವೆರಿ ಪ್ರೌಡ್ ಆಫ್ ಬೀಯಿಂಗ್ ಇಂಡಿಯನ್’ ಎಂದು ನಗೆ ಚೆಲ್ಲುತ್ತಾರೆ ಗ್ಲೆಂಡಾ.

‘ಗ್ಲೆಂಡಾ ಅವರನ್ನು ಇಲ್ಲಿಗೆ ಕರೆತರಬೇಕು ಎಂಬ ಉದ್ದೇಶ ನನಗಿರಲಿಲ್ಲ. ಆಕೆ ಅಲ್ಲೇ ಕೆಲಸ ಮಾಡಿಕೊಂಡು ಖುಷಿಪಡುವುದಾದರೆ ಇರಲಿ ಎಂಬ ಮನಸ್ಸು ನನ್ನದಾಗಿತ್ತು. ಆದರೆ ನಾನು ಬೆಂಗಳೂರಿನಲ್ಲಿ ಹೊಸ ಕಂಪೆನಿ ತೆರೆಯುವ ಉದ್ದೇಶದಿಂದ ಇದ್ದೆ. ಉದ್ಯಮ ಆರಂಭಿಸುವ ಸಲುವಾಗಿ ಇಲ್ಲಿಗೆ ಬರಲೇ ಬೇಕಾಯಿತು. ಈ ನಿರ್ಧಾರವನ್ನು ಗ್ಲೆಂಡಾಗೆ ತಿಳಿಸಿದಾಗ ಆಕೆಯೂ ಇಲ್ಲಿಗೆ ಬರುವುದಾಗಿ ಸಂತೋಷದಿಂದ ಒಪ್ಪಿಕೊಂಡಳು. ಹೀಗಾಗಿ ನಮ್ಮ ಮುಂದಿನ ಬದುಕು ಸದ್ಯದ ಮಟ್ಟಿಗೆ ಬೆಂಗಳೂರಿನಲ್ಲೇ ಎಂಬ ತೀರ್ಮಾನಕ್ಕೆ ಬರಬೇಕಾಯಿತು. ಈಗ ಇಬ್ಬರೂ ಬೆಂಗಳೂರನ್ನು ಬಹುವಾಗಿ ಪ್ರೀತಿಸುತ್ತೇವೆ’ ಎನ್ನುತ್ತಾರೆ ರಹಮ್.

‘ಎನ್‌ಆರ್‌ಐ ಡಾಗ್ಸ್’

ಈ ದಂಪತಿ ಎರಡು ನಾಯಿಗಳನ್ನೂ ಸಾಕಿದ್ದಾರೆ. ಹೀಡಿ ಮತ್ತು ಮೋಲ್ಲಿ. ಎರಡೂ ಇಲ್ಲಿಗೆ ಚೆನ್ನಾಗಿ ಹೊಂದಿಕೊಂಡಿವೆಯಂತೆ. 13 ವರ್ಷ ವಯಸ್ಸಿನ ನಾಯಿಗಳು ಚೂಟಿಯಾಗಿದ್ದು, ಸದಾ ಆಟವಾಡುತ್ತಾ ಇರುತ್ತವಂತೆ. ಇವುಗಳನ್ನು ನೋಡಿದರೆ ಐದು ವರ್ಷದವು ಇದ್ದ ಹಾಗೆ ಇವೆ. ನಾಯಿಗಳೊಂದಿಗೆ ಒಡನಾಟ ಖುಷಿ ಎನಿಸುತ್ತವೆ. ಸಮಯ ಸರಿದುದೇ ಗೊತ್ತಾಗುವುದಿಲ್ಲ ಎನ್ನುತ್ತಾರೆ ಗ್ಲೆಂಡಾ. ಇವರ ಕಂಪೆನಿಯ ಸಿಬ್ಬಂದಿ ಇವಕ್ಕೆ ‘ಎನ್‌ಆರ್‌ಐ ಡಾಗ್ಸ್’ ಅಂತ ಹೆಸರಿಟ್ಟಿದ್ದಾರಂತೆ. ವಾರಾಂತ್ಯದಲ್ಲಿ ಸಣ್ಣ ಪುಟ್ಟ ಪ್ರವಾಸ, ಶಾಪಿಂಗ್ ಹೋಗುವಾಗ ನಾಯಿಗಳನ್ನೂ ಕರೆದೊಯ್ಯುತ್ತಾರಂತೆ.

‘ಪ್ರವಾಸ ಹೋಗುವುದೆಂದರೆ ನಮಗೆ ತುಂಬ ಇಷ್ಟ. ಊಟಿಗೆ ಹೋಗಿ ಕೆಲ ದಿನ ಇದ್ದು ಬಂದಿದ್ದೇವೆ. ಬಂಡೀಪುರ ಅರಣ್ಯಧಾಮ, ಮೈಸೂರು ಸುತ್ತಿದ್ದೇವೆ. ಗೋವಾ, ಹೃಷಿಕೇಶ ನೋಡಿ ಬರುವ ಆಸೆ ಇದೆ’ ಎನ್ನುತ್ತಾರೆ ಅವರು.

**ಅವನೀಶ್**